ಸಿ.ಸಿ ನಂ- 594/2015
ಚಾಸಾ-3 ಪ್ರಾಸಾ-3

**ದಿನಾಂಕಃ 31-08-2023 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಬಿ.ಸಿ.ಎಚ್ ಆರೋಪಿ ಪರ ವಕೀಲರಿಂದಃ**

ಆರೋಪಿತರು ಮತ್ತು ಪಿರ್ಯಾದಿದಾರ ಅಣ್ಣ-ತಮ್ಮಂದಿರು ಎಂದರೆ ಸರಿ. ಸದರಿಯವರ ಜಮೀನು ಅಕ್ಕ-ಪಕ್ಕ ನನ್ನ ಜಮೀನು ಇಲ್ಲ. ಪಿರ್ಯಾದಿದಾರ 1990 ನೇ ಸಾಲಿನಲ್ಲಿ ಅವರ ಹೆಣ್ಣು ಮಕ್ಕಳನ್ನು ಬಿಟ್ಟು ಆಸ್ತಿ ವಿಷಯವಾಗಿ ಅಪಸಾತ್ ಡಿಕ್ರಿ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯವಾಗಿ ಚಾಸಾ-1 ಅವರ ಇಬ್ಬರೂ ಸಹೋದರಿಯರು ಚಾಸಾ-1 ಮತ್ತು ಇನ್ನೂಳಿದ ಸಹೋದರರ ವಿರುದ್ದ ಪಾಲು ವಾಟ್ನಿ ದಾವೆ ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಚಾಸಾ-1 ಅವರು ಮಾಡಿಕೊಂಡ ಅಪಸಾತ್ ಡಿಕ್ರಿ ರದ್ದುಗೊಳಿಸಿ ಅವರ ಇಬ್ಬರೂ ಸಹೋದರಿಯರಿಗೂ ಪಾಲು ನೀಡಬೇಕು ಎಂದು ಆದೇಶ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಈ ಆದೇಶದ ವಿರುದ್ದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಚಾಲ್ತಿಯಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಪ್ರಕರಣದ ಪಿರ್ಯಾದಿಗೆ ಪೈಪಲೈನ ಮೂಲಕ ನೀರು ಹಾಯಿಸಿಕೊಳ್ಳುವ ಹಕ್ಕು ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಹಳ್ಳ ಸುಮಾರು 30 ವರ್ಷಗಳಿಂದ ಬಂದ್ ಆಗಿದ್ದು, ಕೇವಲ ಮಳೆಗಾಲದಲ್ಲಿ ಮಾತ್ರ ನೀರು ಹರಿಯುತ್ತಿತ್ತು ಎಂದರೆ ಸಾಕ್ಷಿಯು ಸುಮಾರು 15 ವರ್ಷಗಳಿಂದ ಹಳ್ಳ ಬಂದ್ ಆಗಿದೆ ಎಂದು ನುಡಿಯುತ್ತಾರೆ.

ಅ.ದಾ ನಂ. 316/2009 ನೇದ್ದರಲ್ಲಿ ನಾನು ಸಾಕ್ಷ್ಯ ನುಡಿದಿಲ್ಲ. ಸದರಿ ದಾವೆಯಲ್ಲಿ ನಾನು ಸಾಕ್ಷ ನುಡಿದಿದ್ದು , ನನ್ನ ಪಾಟೀ ಸವಾಲಿನಲ್ಲಿ ಸದರಿ ಹಳ್ಳದಲ್ಲಿ ಮಳೆಗಾಲ ಕಾಲಕ್ಕೆ ನೀರು ಹರಿಯುತ್ತದೆ, ನಂತರ ನೀರು ಇರುವುದಿಲ್ಲಾ ಅಂತಾ ನುಡಿದಿದ್ದೇನೆ ಅಂದರೆ ಸಾಕ್ಷಿ ತುಂಬಾ ದಿನಗಳು ಆಯಿತು ಈಗ ನೆನಪಿಲ್ಲ ಎಂದು ನುಡಿಯುತ್ತಾರೆ. ಮಳೆಗಾಲದಲ್ಲಿ ಮಳೆಯಾದಾಗ ಜಮೀನಿಗೆ ನೀರು ಹಾಯಿಸಿಕೊಳ್ಳುವ ಪ್ರಶ್ನೆ ಬರುವುದಿಲ್ಲಾ ಎಂದರೆ ಸರಿ.

ಆರೋಪಿತರು ಚಾಸಾ-1 ಅವರಿಗೆ ತೊಂದರೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ಚಾಸಾ-1 ಅವರಿಗೆ ಅವಾಚ್ಯವಾಗಿ ಬೈದಾಡಿ , ಬಡಿಗೆ ಮತ್ತು ಕೊಡಲಿ ಹಿಡಿದು ಜೀವ ಬೆದರಿಕೆ ಹಾಕಿ ಜಗಳ ಮಾಡುತ್ತಿದ್ದಾಗ ನಾನು ಮತ್ತು ಚಾಸಾ-2 ಅವರು ಹೋಗಿ ಜಗಳ ಬಿಡಿಸಿಕೊಂಡೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಿರ್ಯಾದಿಯ ಹೊಲವು ನೀರಾವರಿಯ ಹೊಲವಾಗಿದ್ದು, ಅವರು ಅಲ್ಲಿಯೇ ದೂರದಲ್ಲಿ ರಸ್ತೆಯ ಪಕ್ಕ ವಾಸಿಸುತ್ತಿದ್ದರು. ಪಿರ್ಯಾದಿದಾರ ಹೊಲ ಮತ್ತು ಮನೆಯ ಪಕ್ಕ ಸಾಕಷ್ಟು ಜನವಸತಿ ಇದೆ ಎಂದರೆ ಸರಿಯಲ್ಲ. ಅವರ ಮನೆಯ ಪಕ್ಕ ಇರುವ ರಸ್ತೆ ಹುಬ್ಬಳ್ಳಿ ರಸ್ತೆ ಎಂದರೆ ಸರಿ. ಲೋಕಾಪೂರದಿಂದ ಹೋಗುವಾಗ , ಸದರಿ ರಸ್ತೆಯ ಮೇಲೆ ಸಾಕಷ್ಟು ಜನ ಓಡಾಡುತ್ತಾರೆ ಎಂದರೆ ಸರಿ.

ನನ್ನ ಮುಖ್ಯವಿಚಾರಣೆಯಲ್ಲಿನ ವಿಷಯ ಸುಳ್ಳು ಎಂದರೆ ಸರಿಯಲ್ಲ. ಚಾಸಾ-1 ಅವರ ಜಮೀನಿನಲ್ಲಿ ಒಂದೇ ಬೋರವೆಲ್ಲ ಇದೆ. ಪಿರ್ಯಾದಿದಾರರ ಮಾತು ಕೇಳಿ ಆರೋಪಿತರ ವಿರುದ್ದ ಸುಳ್ಳು ಸಾಕ್ಷ

ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ಪಿರ್ಯಾದಿದಾರರಿಗೂ ಮನಸಾ -ಮನಸಾ ಸರಿಯಿಲ್ಲದ ಕಾರಣ ಪಿರ್ಯಾದಿದಾರನ ಮಾತು ಕೇಳಿ ಆರೋಪಿತರ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-
ಹೆಚ್ಚುವರಿ ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ